ಕ್ರಮಸಂಖ್ಯೆ : 3

ಕರ್ನಾಟಕ ವಿಧಾನ ಸಭೆ
ಹದಿನಾಲ್ಕನೇ ವಿಧಾನಸಭೆ
ಹದಿನಾಲ್ಕನೇ ಅಧಿವೇಶನ

# ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-21)**

ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009ನ್ನು (2009ರ ಕರ್ನಾಟಕ ಅಧಿನಿಯಮ ಸಂಖ್ಯೆ: 25) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 12ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009ರ (2009ರ ಕರ್ನಾಟಕ ಅಧಿನಿಯಮ ಸಂಖ್ಯೆ: 25) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 12ನೇ ಪ್ರಕರಣದ (5)ನೇ ಉಪಪ್ರಕರಣದಲ್ಲಿ "ಅರವತ್ತೈದು ವರ್ಷ" ಎಂಬ ಪದಗಳಿಗೆ " ಅರವತ್ತೇಳು ವರ್ಷ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 49ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 49ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ "ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು" ಎಂಬ ಪದಗಳಿಗೆ "ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳು ಇವರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009ನ್ನು (2009ರ ಕರ್ನಾಟಕ ಅಧಿನಿಯಮ ಸಂಖ್ಯೆ: 25) ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ :-

(i) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ದಲ್ಲಿ ಇರುವಂತೆ ಕುಲಪತಿಗಳ ವಯೋಮಿತಿಯನ್ನು ಅನುಸರಿಸುವುದಕ್ಕಾಗಿ ಕುಲಪತಿಯ ಹುದ್ದೆಯನ್ನು ಹೊಂದಲು ಗರಿಷ್ಠ ವಯೋಮಿತಿಯನ್ನು ಅರವತ್ತೇಳು ವರ್ಷಗಳಿಗೆ ಹೆಚ್ಚಿಸುವುದು; ಮತ್ತು

(ii) ರಾಜ್ಯ ಲೆಕ್ಕ ಪತ್ರಗಳ ಇಲಾಖೆಯ ನಿಯಂತ್ರಕರ ಪದನಾಮವನ್ನು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರಗಳು ಎಂದು ಬದಲಾಯಿಸುವುದು.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಬಸವರಾಜರಾಯರೆಡ್ಡಿ**
ಉನ್ನತ ಶಿಕ್ಷಣ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009ರ (2009ರ ಕರ್ನಾಟಕ ಅಧಿನಿಯಮ ಸಂಖ್ಯೆ: 25) ಉದ್ಧೃತ ಭಾಗ**

Xxx xxx

**12. ಕುಲಪತಿ.-**

Xxx xxx

(5) ಅರವತ್ತೈದು ವರ್ಷ ವಯಸ್ಸು ಆಗಿರುವ ಯಾವ ವ್ಯಕ್ತಿಯೂ ಕುಲಪತಿಯಾಗಿ ನೇಮಕವಾಗತಕ್ಕದ್ದಲ್ಲ ಅಥವಾ ಅವರು ಆ ಹುದ್ದೆಯಲ್ಲಿ ಇರತಕ್ಕದ್ದಲ್ಲ.

Xxx xxx

**49. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.-**

Xxx xxx

(3) ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು ವರ್ಷಕ್ಕೊಮ್ಮೆ ಏಪ್ರಿಲ್ ತಿಂಗಳಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ 197, -ಪ್ರತಿಗಳು 1000, 7ನೇ ನೂನ್ 2017

Serial No : (3)

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION

# THE KARNATAKA RAJYA DR. GANGUBAI HANGAL SANGEETHA MATTU PRADARSHAKA KALEGALA VISHWAVIDYALAYA (AMENDMENT) BILL, 2017

**(L.A. Bill No. 21 of 2017)**

A Bill to amend the Karnataka Rajya Dr. Gangubai Hangal Sangeetha Mattu Pradarshaka Kalegala Vishwavidyalaya Act, 2009.

Whereas it is expedient to amend the Karnataka Rajya Dr. Gangubai Hangal Sangeetha Mattu Pradarshaka Kalegala Vishwavidyalaya Act, 2009 (Karnataka Act No. 25 of 2009) for the purposes hereinafter appearing;

Be it enacted by the Karnataka State Legislature in the sixty-eighth year of the Republic of India, as follows:-

**1. Short title and commencement.-** (1) This Act may be called the Karnataka Rajya Dr. Gangubai Hangal Sangeetha Mattu Pradarshaka Kalegala Vishwavidyalaya (Amendment) Act, 2017.

(2) It shall come into force at once.

**2. Amendment of section 12.-** In the Karnataka Rajya Dr. Gangubai Hangal Sangeetha Mattu Pradarshaka Kalegala Vishwavidyalaya Act 2009, (Karnataka Act No. 25 of 2009) (hereinafter referred to as the principal Act), in section 12, in sub-section (5), for the words "sixty five years", the words "sixty seven years" shall be substituted.

**3. Amendment of section 49.-** In section 49 of the principal Act, in sub-section (3), for the words "Controller of State Accounts", the words "Principal Director, Karnataka State Audit and Accounts" shall be substituted.

## STATEMENT OF OBJECTS AND REASONS

It is considered necessary to amend the Karnataka Rajya Dr. Gangubai Hangal Sangeetha Mattu Pradarshaka Kalegala Vishwavidyalaya Act, 2009 (Karnataka Act No. 25 of 2009),-

(i) to enhance the upper age limit to hold office of Vice Chancellor to sixty seven years which is in conformity with the age limit of Vice Chancellors in the Karnataka State Universities Act, 2000; and

(ii) change the nomenclature of Controller of State Accounts Department as Principal Director, Karnataka State Audit and Accounts.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**BASAVARAJ RAYAREDDI**
Minister for Higher Education

**S. Murthy**
Secretary (I/c)
Karnataka Legislative Assembly

**ANNEXURE**

**THE KARNATAKA RAJYA DR. GANGUBAI HANGAL SANGEETHA MATTU PRADARSHAKA KALEGALA VISHWAVIDYALAYA ACT 2009 (KARNATAKA ACT 25 OF 2009)**

**XXX XXX XXX**

**12. The Vice-Chancellor.-**

XXX XXX XXX

(5) No person shall be appointed or hold office of the Vice-Chancellor if he has attained the age of sixty five years.

XXX XXX XXX

**49. Annual Accounts and Audit.-**

XXX XXX XXX

(3) The accounts of the University shall be audited by the Controller of State Accounts once in a year, in the month of April.

XXX XXX XXX

Government Press, Vikasa Soudha Unit, Bengaluru 7th June, 2017 P7, W.D.197, ~~Copies 1000~~